ಇಲ್ಲಿರೋ ಬ್ರಹ್ಮರಾಕ್ಷಸಿ ಕಂಡ್ರೆ ಸುಮ್ಮನೆ ಬಿಡುವಳೇ ಅಂತೇಳಿ ಅವನನ್ನು ಚಿನ್ನದ ಪಲ್ಲಿ ಮಾಡಿ ಗೋಡೆಗೆ ಅಂಟಿಸಿಬಿಟ್ಟಳು.

ಸರಿ, ಬ್ರಹ್ಮರಾಕ್ಷಸಿ ಬಂದು ಮಲಗೋ ಹೊತ್ತನ್ನೇ ಕಾಯುತ್ತಿದ್ದ ಆ ಹೆಣ್ಣುಮಗಳು ಗೋಡೆ ಮೇಲಿನ ಪಲ್ಲಿಗೆ ಮತ್ತೆ ಜೀವ ಬರಿಸಿದಳು. ಅವನ ಕೈಕಾಲು ಮುಖ ತೊಳಿಯಕೆ ನೀರು ಕೊಟ್ಟು ಉಣ್ಣುವುದಕ್ಕೆ ನೀಡಿದಳು. ಭದ್ರಗೊಮಾರ, ಅದು ಸರಿ ರಾಜಕುಮಾರಿ ನೀನು ಯಾಕೆ ನನ್ನ ಪಲ್ಲಿ ಮಾಡಿಬಿಟ್ಟೆ ಅಂತ ಕೇಳಿದ. ಅದಕ್ಕೆ ಆ ಸುಂದರಿ ಈ ಪಾತಾಳದಲ್ಲಿರೋ ಬ್ರಹ್ಮರಾಕ್ಷಸಿ ನಿನ್ನ ಕಂಡರೆ ಸುಮ್ಮನೇ ಬಿಟ್ಟಾಳಾ? ಸಂಡಿಗೆ, ಚಕ್ಕಲಿ ತಿಂದಂಗೆ ತಿಂದುಬಿಡ್ತಾಳೆ. ಅದಕ್ಕೆ ಅವಳು ಮಲಗುವರೆಗೂ ನೀನು ಕಣ್ಣಿಗೆ ಕಾಣಬಾರದು ಅಂತೇಳಿ ಪಲ್ಲಿ ಮಾಡಿ ಗೋಡೆಗೆ ಮುಟ್ಟಿಸಿದ್ದೆ ಎಂದಳು. ಭದ್ರಗೊಮಾರ ಸುಂದರಿ ನಾನು ಇಲ್ಲಿತಂಕ ಬಂದ ಉದ್ದೇಶವೆಂದರೆ ಮುತ್ತಿನ ಬುಡ, ಚಿನ್ನದ ನಡ, ಪಚ್ಚೆ ತೆನೆ ಇರುವಂಥ ಮರ ಬೇಕು. ಅದನ್ನ ತಗೆದುಕೊಳ್ಳದೆ ನಾನು ಹೋಗಂಗಿಲ್ಲ. ನನ್ನ ಪ್ರಾಣ ಇಲ್ಲೇ ಹೋಗಬೇಕು. ಇಲ್ಲಾ ವೃಕ್ಷನ ತಗಂಡೋಗಬೇಕು ಅಂತ ಹೇಳಿದ. ಅದಕ್ಕೆ ಹೆಣ್ಣುಮಗಳು ಅಯ್ಯೋ ಸ್ವಾಮಿ ಬ್ರಹ್ಮ ರಾಕ್ಷಸಿನ ಕೊಂದಾಕದೆ ಆ ವೃಕ್ಷನ ಮುಟ್ಟಂಗಿಲ್ಲ ಅಂದಳು. ಹಂಗಾದರೆ ರಾಕ್ಷಸಿನ ಸಾಯಿಸೋ ಮಾರ್ಗನ ನೀನೇ ಹೇಳು ಅಂದ. ನಾಳೆ ಅವಳನ್ನೇ ಕೇಳಿ ಹೇಳ್ತೀನಿ ಅಂದು ರಾಜಕುಮಾರಿ ತಿರುಗಿ ಭದ್ರಗೊಮಾರನನ್ನು ಪಲ್ಲಿ ಮಾಡಿ ಗೊಡೆಗೆ ಅಂಟಿಸಿಬಿಟ್ಟಳು.

ಬ್ರಹ್ಮರಾಕ್ಷಸಿ ಬೆಳಗ್ಗೆ ಎದ್ದು ರಾತ್ರಿ ತಂದಿದ್ದ ಮೂರು ಹೆಣ ತಿಂದು, ಎರಡು ಕೊಪ್ಪರಿಗೆ ನೀರು ಕುಡಿದು ವನಕೆ ತಗಂಡು ಹಲ್ಲು ಚುಚ್ಕಂತ ಸಿಕ್ಕಿರೋ ಮೂಳೆನೆಲ್ಲ ಬಿಡಿಸ್ಕಂತ ಕೂತ್ಕಂತು. ಆಗ ರಾಜಕುಮಾರಿ ಎದ್ದು ಅಮ್ಮಾ ಈವತ್ತು ನೀನು ನರಮನ್ಸುಷರ ಹೆಣಾ ತರಕೆ ಹೊರಗಡೆ ಹೋಗದಿಲ್ಲವೇ ಅಂತ ಕೇಳಿದಳು. ಬ್ರಹ್ಮರಾಕ್ಷಸಿ ಹೋಗ್ತೀನಿ, ಹೋಗ್ತೀನಿ ಅಂದ್ಲು. ಆಗ ಹೆಣ್ಣು ಮಗಳು ಹೋಗದಾದರೆ ದೂರ ಹೋಗಬೇಡಮ್ಮ. ನಂಗೆ ಯಾಕೋ ಇವತ್ತು ಮಾತ್ರ ಭಯಾ ಆಯ್ತಾ ಉಂಟು. ಬಲಗಣ್ಣು ಬೇರೆ ಹೊಡಕಂತಾದೆ, ನಿಂಗೆ ಏನಾಯ್ತದೋ ಏನೋ ಕಾಣೆ ಎಂದಳು. ಆಗ ರಾಕ್ಷಸಿ ಏಯ್ ಅದ್ಯಾವ ಗಂಡಸೇ ನನ್ನ ಮುಂದೆ ನಿಲ್ಲವನು. ನನ್ನ ಪ್ರಾಣ ತೆಗಿಯಾಕೆ ಯಾರ ಕೈಯಿಂದಲೂ ಆಗಲ್ಲ. ಮುಂದ್ಲಿಂದ ಎರಡು ಕಠಾರಿ, ಹಿಂದ್ಲಿಂದ ಎರಡು ಕಠಾರಿ ಹಿಡಕಂಡು ಬಂದು ನನ್ನ ಕಡಿದರೂ ಪ್ರಾಣ ಹೋಗಂಗಿಲ್ಲ ಅಂದಳು. ರಾಜಕುಮಾರಿ ಮತ್ತೆ ನಿನ್ನ ಪ್ರಾಣ ಎಲ್ಲಮ್ಮ ಉಂಟು ಅಂದು ಕೇಳಿದಳು. ಬ್ರಹ್ಮರಾಕ್ಷಸಿ, ಇಲ್ಲೇ ಪಾತಾಳ ಲೋಕದಲ್ಲಿ ಒಂದು ಹೆಬ್ಬಾಲದ ಮರವಿದೆ. ಅದರ ಕೆಳಗಡೆ ಒಂದು ನೆಲ ಮಾಳಿಗೆ ಉಂಟು. ಅಲ್ಲಿ ಏಳು ಕರಬಾನ. ಒಂದು ಕರಬಾನದಲ್ಲಿ ಪಂಜರ. ಪಂಜರದಲ್ಲಿರುವ ಗಿಳಿಯಲ್ಲಿ ನನ್ನ ಪ್ರಾಣವುಂಟು. ಆ ಗಿಳಿ ಸಾಯತಂಕ ನಾನು ಸಾಯಲ್ಲ ಅಂದಳು. ಹೀಗಂತೇಳಿ ಬ್ರಹ್ಮರಾಕ್ಷಸಿ ನರಮನ್ಸುಷರ ಹೆಣ ತರುವುದಕ್ಕೆ ಹೊರಗಡೆ ಹೊಂಟಿತು. ಹುಡುಗಿ ಗೋಡೆ ಮೇಲಿನ ಪಲ್ಲಿಗೆ ಜೀವ ಬರಿಸಿದಳು. ಜೀವ ಪಡೆದ ಭದ್ರಗೊಮಾರ ಎಲ್ಲಿ ಆ ಬ್ರಹ್ಮರಾಕ್ಷಸಿ ಅಂತಂದ. ಅಯ್ಯೋ ನರಮನಷರ ಹೆಣ ತರಕೆ ಹೋಗವಳೆ, ನೀನೂ ಅವಳ ಕೈಯ್ಯಾಗೆ ಸಿಕ್ಕಿದರೆ ನೊಣ ನುಂಗಿದಂಗೆ ನುಂಗ್ತಳೆ. ಮೊದಲು ಪ್ರಾಣಪಕ್ಷಿ ಹಿಡಿದು ಕತ್ತು ಮುರಿದಾಕಿಬಿಡು, ಅಂತ ಅವಳ ಜೀವ ಇರುವ ಜಾಗ ಹೇಳಿಕೊಟ್ಟಳು.

ಆಗಿಂದಾಗ್ಲೆನೆ ಭದ್ರಗೊಮಾರ ನೆಲಮಾಳಿಗೆ ಒಳಗೆ ನುಗ್ಗಿ ಕರಬಾನ ತೆಗದು ಗಿಳಿ ಹಿಡಿದು ಕತ್ತು ಮುರಿದಾಕಿದ. ಯಾರೋ ನನ್ನ ಪ್ರಾಣ ಪಕ್ಷಿ ಹಿಡಿದು ಮುರಿದು ಹಾಕುತ್ತಿದ್ದಾರೆ. ಆಹಾ, ನಿನ್ನೆ ನಾನು ನನ್ನ ಪ್ರಾಣಪಕ್ಷಿ ಇರುವ ಜಾಗ ಹೇಳಿಬಿಟ್ಟೆ. ಹೇಳಿದ್ದೇ ತಪ್ಪಾಯ್ತು ಅಂದುಕೊಂಡೇ ಸತ್ತು